## ಆನ್ ಲೈನ್ ಅಫಿಡೆವಿಟ್ ಗಳನ್ನು ನಾವು ಏಕೆ ಮತ್ತು ಹೇಗೆ ಉಪಯೋಗಿಸಬೇಕು?

## ಏಕೆ?

1. ಮೊದಲ ಬಾರಿಯ ದಾಖಲಾತಿ ಮತ್ತು ತದನಂತರದ ವಾರ್ಷಿಕ ನೋಂದಣಿಯ ಸಮಯದಲ್ಲಿ ಪ್ರತಿವರ್ಷವೂ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಆತನ/ಆಕೆಯ ಪೋಷಕರು ಒಂದು ರಾಗಿಂಗ್ ವಿರೋಧಿ ಅಫಿಡೆವಿಟ್ ಅನ್ನು ಸಲ್ಲಿಸುವುದು ಖಡ್ಡಾಯವಾಗಿದೆ. ಇವು ಯುಜಿಸಿಯ ನಿಬಂಧನೆಗಳು.
2. ಈ ಅಫಿಡೆವಿಟ್ ಗಳ ಮೂಲಕ ವಿದ್ಯಾರ್ಥಿಗಳ ಸಂಪರ್ಕ ವಿವರಗಳನ್ನು ಸಂಗ್ರಹಿಸುವುದು ಮತ್ತು ಒಂದು ಕೇಂದ್ರ ಸ್ಥಾನದಲ್ಲಿ ವಿದ್ಯುನ್ಮಾನವಾಗಿ ಶೇಖರಿಸಿಡಬೇಕೆಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಆದೇಶಿಸಿದೆ.
3. ಈವರೆಗೆ ಪ್ರತಿಯೊಂದು ಕಾಲೇಜು ಇಂತಹ ಮಾಹಿತಿಯನ್ನು ಸಂಗ್ರಹಿಸುತ್ತಿತ್ತು. ಆದರೆ ಇದನ್ನು ಯಾವುದೇ ಕೇಂದ್ರ ಸ್ಥಾನದಲ್ಲಿ ಶೇಖರಿಸಿಡಲಾಗುತ್ತಿರಲಿಲ್ಲ. ಆದರೆ ಈ ವರ್ಷ ರಾಗಿಂಗ್ ನಿಯಂತ್ರಣ ಕಾರ್ಯಕ್ರಮವು ರಾಗಿಂಗ್ ವಿರೋಧಿ ಅಫಿಡೆವಿಟ್ ಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಒಂದು ಆನ್ ಲೈನ್ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಿದೆ. ಪರಿಣಾಮವಾಗಿ ಕಾಲೇಜಿನ ಅಧಿಕಾರಿಗಳು ಪ್ರತ್ಯೇಕವಾಗಿ ಮಾಹಿತಿಯನ್ನು ಸಂಗ್ರಹಿಸಿ, ಒಂದುಗೂಡಿಸಬೇಕಿಲ್ಲ. ಇದು ತುಂಬಾ ಸಮಯ ಮತ್ತು ಶಕ್ತಿಯನ್ನು ಉಳಿಸುತ್ತದೆ.

## ಹೇಗೆ?

4. ಇದು 3 ಕ್ರಮಗಳನ್ನು ಒಳಗೊಂಡಿರುವ ಒಂದು ಸರಳ ಪ್ರಕ್ರಿಯೆ.
   - ಹಂತ 1: www.ANTIRAGGING.in ಅಥವಾ www.AMANMOVEMENT.org ಗೆ ಲಾಗ್ ಆನ್ ಮಾಡಿ ಆನ್ ಲೈನ್ ಅಫಿಡೆವಿಟ್ - ಎಂಬ ಗುಂಡಿಯನ್ನು ಕ್ಲಿಕ್ ಮಾಡಿ.
   - ಹಂತ 2: ಸರಿಯಾದ ಮಾಹಿತಿಯನ್ನು ತುಂಬಿಸಿ, ಅರ್ಜಿಯನ್ನು ಸಲ್ಲಿಸಿ.
   - ಹಂತ 3: ಯಶಸ್ವಿಯಾಗಿ ತುಂಬಿಸಿದ ನಂತರ, ಈ-ಮೇಲ್ ಮೂಲಕ ವಿದ್ಯಾರ್ಥಿಗಳು ಮತ್ತು ಪೋಷಕರಿಗಾಗಿ ನೀವು ಅಫಿಡೆವಿಟ್ ಗಳನ್ನು ಪಡೆಯುವಿರಿ.
5. ನೀವೊಂದು ಈ ಮೇಲ್ ವಿಳಾಸವನ್ನು ಹೊಂದಿರದಿದ್ದರೆ, ದಯವಿಟ್ಟು ನೀವು ಲಾಗ್ ಇನ್ ಮಾಡುವ ಮುನ್ನ ಅದನ್ನು ಸೃಷ್ಟಿಸಿಕೊಳ್ಳಿ. ನಿಮ್ಮ ಪೋಷಕರು ಈಮೇಲ್ / ಸ್ಥಿರ ದೂರವಾಣಿ / ಮೊಬೈಲ್ ಹೊಂದಿಲ್ಲ ಎಂದಾದರೆ ಕಂಗಾಲಾಗಬೇಡಿ. ನೀವು ನಿಮ್ಮ ಸ್ನೇಹಿತರು ಅಥವಾ ಸಂಬಂಧಿಕರ ಸಂಪರ್ಕ ವಿವರಗಳನ್ನು ನೀಡಬಹುದು. ಚಿಂತಿಸಲು ಅಗತ್ಯವಿಲ್ಲ. ನಿಮ್ಮ ಅರ್ಜಿಯನ್ನು ಸಲ್ಲಿಸುವಾಗ ನೀವು ಏನಾದರೂ ತಪ್ಪು ಮಾಡಿದರೆ, ನೀವು ಮೊದಲಿನಿಂದ ಆರಂಭಿಸಬಹುದು ಮತ್ತು ಮಾಹಿತಿಯನ್ನು ಮತ್ತೊಮ್ಮೆ ನೀಡಬಹುದು. ಇದು ಬಹಳ ಸರಳ ಪ್ರಕ್ರಿಯೆಯಾದ್ದರಿಂದ, ಯಾವುದೇ ಸಮಸ್ಯೆ ಎದುರಾಗದು.